ಪ್ರಕೃತಿ





# ಬೊಮಾಂಟಿಯಾ

■ ಚಿತ್ರ– ಬರಹ: **ಮಂಜುನಾಥ ಡಿ.ಎಸ್.**

**ಕ**ಣ್ಮನ ಸೆಳೆಯುವ ಈ ಬೆಡಗಿನ ಪುಷ್ಪಗಳ ವೈಜ್ಞಾನಿಕ ಹೆಸರು ಬೊಮಾಂಟಿಯಾ ಗ್ರಾಂಡಿಫ್ಲೋರಾ. ಇಪ್ಪತ್ತು ಅಡಿಗಳೆತ್ತರಕ್ಕೆ ಬೆಳೆಯಬಲ್ಲ ನಯವಾದ ಬಳ್ಳಿಗಳಲ್ಲಿ ಬಿಳಿಯ ಹೂಗಳು ಹೀಗೆ ಕಂಗೊಳಿಸುತ್ತವೆ. ಎಂಟರಿಂದ ಹತ್ತು ಸೆಂಟಿಮೀಟರ್ ಉದ್ದದ, ಘಂಟಾಕಾರದ, ಪರಿಮಳಯುಕ್ತ ಹೂಗಳಿವು.

ಪುಷ್ಪಪಾತ್ರೆಗಳು ಹಾಗು ಆಲಿಕೆಯಾಕಾರದ ದಳಸಂಪುಟಗಳು ಐದೈದು ಪಾಲಿಗಳಿಂದ ಕೂಡಿರುತ್ತವೆ. ಐದು ಕೇಸರಗಳು ಪುಷ್ಪದ ಒಳಗಿರುತ್ತವೆ. ಬಾಣಾಕಾರದ ಪರಾಗಕೋಶಗಳು ಪಂಚಪಾರ್ಶ್ವಗಳ ಶಂಕಾಕೃತಿ ಹೊಂದಿರುತ್ತವೆ. ಉಪೋಷ್ಣವಲಯದಲ್ಲಿ ಯಥೇಚ್ಛವಾಗಿ ಬೆಳೆಯುವ ಸಸ್ಯದ ಮೂಲ ಚೀನಾ ಹಾಗೂ ಭಾರತ.

ಇದರ ರೆಂಬೆಗಳಿಂದ ಉತ್ಪಾದಿಸಲ್ಪಡುವ ನಾರು, ಹಗ್ಗಗಳ ತಯಾರಿಕೆಗೆ ಉಪಯೋಗ. ಶುಭ್ರ ಶ್ವೇತ ವರ್ಣದ ಈ ನಾರು ಸಸ್ಯಜನ್ಯ ರೇಷ್ಮೆಯ ನಾರುಗಳಲ್ಲಿಯೇ ಅತ್ಯಂತ ಕಾಂತಿಯುತ. ಅಷ್ಟೇ ಶಕ್ತಿಯುತ. ಈ ಸಸ್ಯದ ಬೇರು ಮತ್ತು ಎಲೆಗಳು ಸಂಧಿವಾತ ಸಂಬಂಧದ ನೋವು ನಿವಾರಣಾ ಔಷಧಿಗಳ ತಯಾರಿಕೆಯಲ್ಲಿ ಬಳಕೆಯಾಗುತ್ತವೆ. ಇದಕ್ಕೆ ನೇಪಾಳ್ ಟ್ರಂಪೆಟ್ ಫ್ಲವರ್, ಈಸ್ಟರ್ ಲಿಲ್ಲಿ ವೈನ್, ಹೆರಾಲ್ಡ್ಸ್ ಟ್ರಂಪೆಟ್ ಎಂಬ ಪರ್ಯಾಯ ನಾಮಗಳೂ ಇವೆ.